**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್**

**ಸಿ.ಸಿ ನಂ.960/2021**

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | ಸುರೇಶ ಕೂಸನೂರ | ಪಿಡಬ್ಲ್ಯೂ | 6 |
| ತಂದೆ:ಗಂಡನ ಹೆಸರು | : | ಬಸವಣ್ಣೆಪ್ಪ | ಸಿಡಬ್ಲ್ಯೂ | 11 |
| ವಯಸ್ಸು | : | 44 ವರ್ಷ | | |
| ಉದ್ಯೋಗ | : | ಮುಖ್ಯ ಪೇದೆ, ಹಾನಗಲ್ ಪೋಲಿಸ್ ಠಾಣೆ, | | |
| ವಾಸ ಸ್ಥಳ | : | ಹಾನಗಲ್ | | |

**ದಿನಾಂಕ: 19.02.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಸಹಾಯಕ ಸರಕಾರಿ ಅಭಿಯೋಜಕರಿಂದ:**

ನಾನು 2015 ರಿಂದ 2020 ರವರೆಗ ಆಡೂರ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಅಂತಾ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 28.05.2018 ರಂದು ಚಾಸಾ-17 ರವರು ಅಪಘಾತವಾದ ಸ್ಥಳಕ್ಕೆ ನನ್ನನ್ನು ಕರೆದುಕೊಂಡು ಹೋಗಿದ್ದರು. ಆ ಸಂದರ್ಭದಲ್ಲಿ ಚಾಸಾ-2 ಮತ್ತು 3 ರವರನ್ನು ಆ ಸ್ಥಳದಲ್ಲಿ ಹಾಜರು ಪಡಿಸಿಕೊಂಡು ಚಾಸಾ-1 ರವರು ಸ್ಥಳ ತೋರಿಸಿದ ಮೇರೆಗೆ ಚಾಸಾ-2 ಮತ್ತ 3 ಹಾಗೂ ಚಾಸಾ-17 ರವರು ಹೇಳಿದಂತೆ ಬರೆದುಕೊಟ್ಟಿರುತ್ತೇನೆ. ಆ ಸ್ಥಳ ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-2 ಎಂದು, ಸದರಿಯವರ ಸಹಿಯನ್ನು ನಿಪಿ-2 (ಸಿ) ಎಂದು ಗುರುತಿಸಲಾಯಿತು. ಆಗ ಮುಂಜಾನೆ 10.30 ರಿಂದ 11.30 ಗಂಟೆ ಸಮಯವಾಗಿತ್ತು. ಚಾಸಾ-17 ರವರ ಮೌಖಿಕ ಆದೇಶದ ಮೇರೆಗೆ ಆ ಸ್ಥಳದ ಕಚ್ಚಾ ನಕಾಶೆಯನ್ನು ತಯಾರಿಸಿರುತ್ತೇನೆ. ಆ ನಕಾಶೆಯನ್ನು ನಿಪಿ-16 ಎಂದು

ಸದರಿಯವರ ಸಹಿಯನ್ನು ನಿಪಿ-16 (ಎ) ಎಂದು ಗುರುತಿಸಲಾಯಿತು. ಆ ಸಂದರ್ಭದಲ್ಲಿ ಚಾಸಾ-12 ರವರು ಆ ಸ್ಥಳದ ಫೋಟೋವನ್ನು ತೆಗೆದರು. ಆ ಫೋಟೋವನ್ನು ನೋಡಿದರೆ ಗುರುತಿಸುತ್ತೇನೆ. ಅದನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿದೆ. ಅದೇ ದಿನ ತಿಳುವಳ್ಳಿಯ ಹೊರ ಪೋಲಿಸ್ ಠಾಣೆಗೆ ಹೋಗಿ ಅಪಘಾತಕ್ಕೊಳಪಟ್ಟ ಮೋಟಾರ ಸಂಖ್ಯೆ ಕೆ ಎ -15 ಡಬ್ಲ್ಯು-9141 ರ ವಾಹನಕ್ಕೆ ಸಂಬಂಧಪಟ್ಟ ಪರಿಶೀಲನಾ ಪಂಚನಾಮೆಯನ್ನು ಚಾಸಾ-1 ರಿಂದ 3 ರವರ ಸಮಕ್ಷಮ ಮದ್ಯಾಹ್ನ 12.00 ರಿಂದ 12.30 ಗಂಟೆಯವರೆಗೆ ಬರೆದಿರುತ್ತೇನೆ. ಅ ವಾಹನ ಪರಿಶೀಲನಾ ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-4 ಎಂದು ಗುರುತಿಸಲಾಗಿದೆ. ಸದರಿಯವರ ಸಹಿಯನ್ನು ನಿಪಿ-4(ಸಿ) ಎಂದು ಗುರುತಿಸಲಾಯಿತು. ಆ ಸಂದರ್ಭದಲ್ಲಿ ಚಾಸಾ-12 ರವರ ಮೂಲಕ 5 ಫೋಟೋಗಳನ್ನು ತೆಗೆಯಲಾಗಿರುತ್ತದೆ. ಅವುಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ಈಗಾಗಲೇ ನಿಪಿ-5 ರಿಂದ 9 ಎಂದು ಗುರುತಿಸಲಾಗಿದೆ. ಈ ಬಗ್ಗೆ ಚಾಸಾ-17 ರವರು ನನ್ನ ಹೇಳಿಕೆ ಪಡೆದರು.

**:ಪಾಟೀ ಸವಾಲು: ಆರೋಪಿ ಪರ ಶ್ರೀ.ಎ ಸಿ ಸಿ ಪರ ಶ್ರೀ. ಆರ್ ಎಸ್ ಟಿ ವಕೀಲರಿಂದ:**

ನಾನು ಸ್ಥಳಕ್ಕೆ ಹೋಗುವಕ್ಕಿಂತ ಮುಂಚೆ ಚಾಸಾ-2 ಮತಜ್ತ 3 ರವರು ಆಸ್ಥಳದಲ್ಲಿ ಇದ್ದರು. ಅವರುಗಳನ್ನು ಹೊರತು ಪಡಿಸಿ ಚಾಸಾ-1 ರವರು ಸಹ ಆ ಸ್ಥಳದಲ್ಲಿ ಇದ್ದರು. ಚಾಸಾ-2 ಮತ್ತು 3 ರವರು ಚಾಸಾ-1 ರವರೇ ಆ ಸ್ಥಳಕ್ಕೆ ಕರೆದುಕೊಂಡು ಬಂದಿದ್ದರು. ನಾನು ಸ್ಥಳಕ್ಕೆ ಹೋದಾಗ ಮುಂಜಾನೆ 12.20 ಗಂಟೆ ಸಮಯವಾಗಿತ್ತು. ನಾನು ಸ್ಥಳಕ್ಕೆ ಹೋದಾಗ ಆರ್ ಟಿ ಓ ಮತ್ತು ಪಿ ಡಿ ಓ ಇಲಾಖೆಯವರು ಆ ಸ್ಥಳದಲ್ಲಿ ಇರಲಿಲ್ಲ. ಹಾತ್ ನಕಾಶೆಯಲ್ಲಿ ಚಾಸಾ-2 ಮತ್ತು 3 ರವರ ಸಹಿ ಪಡೆದುಕೊಂಡಿರುವುದಿಲ್ಲ. ಹಾತ್ ನಕಾಶೆಯನ್ನು ಸ್ಥಳದಲ್ಲಿಯೇ ತಯಾರಿಸಿದೆವು. ನಮ್ಮಲ್ಲಿ ಐ ಓ ಎಟ್ ಇದ್ದು ಅದರ ಮೂಲಕ ಸ್ಥಳದ ವಿಸ್ತೀರ್ಣವನ್ನು ಮಾಡಿರುತ್ತೇವೆ. ಆ ದಿನ ನಾನು ಆ ಸ್ಥಳಕ್ಕೆ ಹೋಗಿಲ್ಲ ಸ್ಥಳ ಪಂಚನಾಮೆ ಮಾಡಿಲ್ಲ ಐ ಓ ಕಿಟ್ ಮೂಲಕ ಆ ಸ್ಥಳವನ್ನು ಅಳತೆ ಮಾಡಿಲ್ಲ ಎಂದರೆ ಸರಿಯಲ್ಲ. ಆ ಸ್ಥಳದಲ್ಲಿ ಸುಮಾರು 1 ಗಂಟೆಗಳ ಕಾಲ ಪಂಚನಾಮೆ ಪ್ರಕ್ರಿಯೆ

ಜರುಗಿಸಿರುತ್ತೇವೆ. ಚಾಸಾ−2 ಮತ್ತು 3 ರವರು ಆ ಸ್ಥಳದಿಂದ ತಿಳುವಳ್ಳಿ ಪೋಲಿಸ್ ಠಾಣೆಗ ತಮ್ಮ ಬೈಕ್ ಮೂಲಕ ಬಂದರು. ನಾವು ಪೋಲಿಸ್ ಠಾಣೆಗ ಬಂದಾಗ ಮುಂಜಾನೆ 11.50 ಗಂಟೆಯಾಗಿತ್ತು. ನಾವು ಮೋಟರ್ ವಾಹನ ಪರಿಶೀಲನೆ ಮಾಡುವ ಸಲುವಾಗಿಯೇ ಠಾಣೆಗೆ ಹೋದೆವು. ಆ ಪಂಚನಾಮೆಯಾದ ನಂತರ ದಾಖಲೆಗಳನ್ನು ನಮ್ಮ ಮೇಲಾಧಿಕಾಯವರು ಪರಿಶೀಲನೆ ಮಾಡಿದರು. ಆ ದಿನ ಚಾಸಾ−17 ರವರು ಹೇಳಿದಂತೆ ವಾಹನ ಪರಿಶೀನಾ ಪಂಚನಾಮೆಯನ್ನು ಬರೆದಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಈ ಘಟನೆಗೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಸಹ ನಮ್ಮ ಮೇಲಾಧಿಕಾರಿಯವರ ಮಾತು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

Sd/-

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಹಾನಗಲ್

ಸಾಕ್ಷಿಧಾರರ ಸಹಿ